

بسم اللهِ الرّحمٰن الرّحيم

# ಯು.ಕೆ. ಜಲ್ಸ ಸಾಲಾನ 2014: ಜಲ್ಸಕ್ಕೆ ಆಗಮಿಸುವ ಉದೇಶಲಕ್ಷ್ಯ ಅಲ್ಲಾಹನಿಗೋಸ್ಕರ ಮತ್ತು ಅವನ ಸಂಪ್ರೀತಿ ಗಳಿಸುವುದು ಮಾತ್ರವಾಗಿರಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **29-08-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಈ ದಿನ ಸಾಯಂಕಾಲ ಬ್ರಿಟನಿನ ಅಹ್ಮದಿಯಾ ಜಮಾಅತಿನ ಜಲ್ಸ ಅಧಿಕೃತವಾಗಿ ಪ್ರಾರಂಭವಾಗಲಿರುವುದು. ಈ ದಿನದ ಜುಮುಅ ಸಹ ಈ ಜಲ್ಸದ ಒಂದು ಭಾಗವೇ ಆಗಿದೆ. ನಾನು ಕಳೆದ ವಾರದ ಖುತುಬದಲ್ಲಿ ಹೇಳಿದ ಹಾಗೆ ಜಲ್ಸಕ್ಕೆ ಆಗಮಿಸುವ ಅತಿಥಿಗಳು ಒಂದು ಒಳ್ಳೆಯ ಉದ್ದೇಶದಿಂದ ಆಗಮಿಸುತ್ತಾರೆ. ಧರ್ಮದ ವಾಸ್ತವಿಕತೆಯನ್ನು ಅರಿತುಕೊಳ್ಳುವುದು, ಧರ್ಮವನ್ನು ಕಲಿತು ಆಧ್ಯಾತ್ಮಿಕ ಪ್ರಗತಿ ಗಳಿಸಲು ಪ್ರಯತ್ನಿಸುವುದು ಆ ಉದ್ದೇಶವಾಗಿದೆ. ಉತ್ತಮವಾದ ವಾತಾವರಣದಲ್ಲಿ ತಮ್ಮ ಸಹಜವಾದ ಉತ್ತಮ ಗುಣಗಳನ್ನು ಇನ್ನಷ್ಟು ಉತ್ತಮಗೊಳಿಸುವುದು, ಅದಕ್ಕೋಸ್ಕರ ಪ್ರಯತ್ನಿಸುವುದು, ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂದು ನಾವು ಮಾಡಿರುವ ಪ್ರತಿಜ್ಞೆಯನ್ನು ಈಡೇರಿಸಲು ಅತ್ಯುತ್ತಮವಾದ ಮಾರ್ಗಗಳನ್ನು ಕಂಡುಕೊಂಡು ಅದರ ಬಗ್ಗೆ ಜ್ಞಾನ ಗಳಿಸಿ ಅವುಗಳ ಪ್ರಕಾರ ವರ್ತಿಸಲು ಪ್ರಯತ್ನಿಸುವುದು, ಇತರ ಸೃಷ್ಟಿಗಳ ಬಗ್ಗೆ ತಮ್ಮ ಹಕ್ಕುಗಳನ್ನು (ಹುಕೂಕುಲ್ ಇಬಾದ್) ಈಡೇರಿಸಲು ಮೊದಲಿಗಿಂತ ಹೆಚ್ಚು ಕಾಳಜಿ ವಹಿಸುವುದು. ತಮ್ಮ ನಾಲಗೆಗಳನ್ನು **ಝಿಕ್ರೆಇಲಾಹಿ** (ಅಲ್ಲಾಹನ ನಾಮ ಸ್ಮರಣೆ) ಮೂಲಕ ಪಾವನಗೊಳಿಸಲು ಪ್ರಯತ್ನಿಸುವುದು, ಇದಕ್ಕಿಂತ ಮೊದಲು ಇದರ ಬಗ್ಗೆ ಕಾರ್ಯೋನ್ಮುಖರಾಗಿದ್ದರೆ ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿ ಅವುಗಳನ್ನು ಮಾಡಲು ಪ್ರಯತ್ನಿಸುವುದು, ಇವುಗಳೆಲ್ಲಾ ಇಲ್ಲಿಗೆ ಆಗಮಿಸುವ ಅತಿಥಿಗಳ ಉದ್ದೇಶವಾಗಿದೆ. ಆರಾಧನೆಗೆ ಸಂಬಂಧಿಸಿ ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನಾವು ಯಾವ ಉನ್ನತ ಮಟ್ಟವನ್ನು ತಲಪಬೇಕೆಂದು ಆಶಿಸುತ್ತಾರೋ ಆ ಉನ್ನತ ಮಟ್ಟವನ್ನು ತಲಪಲು ಪ್ರಯತ್ನಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್** – "ನಾನು ಜಿನ್ನ್‌ಗಳನ್ನೂ ಮನುಷ್ಯರನ್ನೂ ನನ್ನನ್ನು ಆರಾಧಿಸಲಿಕ್ಕೋಸ್ಕರ ಸೃಷ್ಟಿಸಿರುವೆನು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಪವಿತ್ರ ಖುರ್‌ಆನ್‌ನಲ್ಲಿರುವ ಈ ವಚನದ ಪ್ರಕಾರ ಮನುಷ್ಯನ ಜೀವಿತದ ಮೂಲ ಉದ್ದೇಶ ಅಲ್ಲಾಹನ ಆರಾಧನೆ ಮಾಡಿ ಅಲ್ಲಾಹನ ಬಗ್ಗೆ ಜ್ಞಾನ ಗಳಿಸಿ, ಅವನಿಗೋಸ್ಕರ ಜೀವಿಸುವುದಾಗಿದೆ."

ಜಲ್ಸ ಸಾಲಾನಕ್ಕೆ ಬಂದು ಸೇರುವ ಪ್ರತಿಯೊಬ್ಬ ವ್ಯಕ್ತಿ ತಾನು ಇಲ್ಲಿಗೆ ಆಗಮಿಸಿದುದು ಅಲ್ಲಾಹನಿಗೋಸ್ಕರ ಮಾತ್ರವಾಗಿದೆ ಎಂದೂ ಅಲ್ಲಾಹನ ಸಂಪ್ರೀತಿ ಗಳಿಸುವುದೇ ತನ್ನ ಉದ್ದೇಶಲಕ್ಷ್ಯ ಎಂದೂ ತಿಳಿದುಕೊಳ್ಳಬೇಕು. ಹೀಗೆ ಮಾಡಿಕೊಳ್ಳುವುದಿಲ್ಲವಾದರೆ ಜಲ್ಸಕ್ಕೆ ಬಂದು ಸೇರುವವರು ಅನುಭವಿಸಿದ ಕಷ್ಟ ಮತ್ತು ಅವರು ಮಾಡಿದ ಖರ್ಚು ಈ ಜಲ್ಸದ ಉದ್ದೇಶಲಕ್ಷ್ಯಗಳನ್ನು ಈಡೇರಿಸುವವು ಆಗಲಾರವು. ಜಲ್ಸಕ್ಕೆ ಆಗಮಿಸುವವರಿಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಜಲ್ಸ ಸಾಲಾನದಲ್ಲಿ ಅವರು ತಮ್ಮ ಹೊಣೆಗಾರಿಕೆಗಳನ್ನು ಈಡೇಸಿದರೆ ಅವರ ಮಹತ್ವವು ವರ್ಧಿಸುತ್ತದೆ. ನಾನು ಕಳೆದ ವಾರದ ಖುತುಬದಲ್ಲಿ ಹೇಳಿದ ಹಾಗೆ ಈ ಅತಿಥಿಗಳಿಗೆ ಸೇವೆ ಮಾಡಲು ಅನೇಕ ಜನರು ಸ್ವಯಂಸೇವಕರಾಗಿ ಮುಂದಕ್ಕೆ ಬರುತ್ತಾರೆ. ಈ ಸ್ವಯಂಸೇವಕರ ಅನುಗ್ರಹ ಮತ್ತು ಮಹತ್ವ ಇಮ್ಮಡಿ ಆಗುತ್ತದೆ. ಏಕೆಂದರೆ ಅವರು ಜಲ್ಸಕ್ಕೆ ಆಗಮಿಸಿದ ಪುಣ್ಯ ಗಳಿಸುವುದರೊಂದಿಗೆ ಅತಿಥಿಗಳಿಗೆ ಸೇವೆ ಸಲ್ಲಿಸಿ ಅನುಗ್ರಹ ಪಡೆಯುತ್ತಾರೆ. ಅವರು ತಮ್ಮ ಆಧ್ಯಾತ್ಮಿಕ ಮಟ್ಟವನ್ನು ಉತ್ತಮಗೊಳಿಸುತ್ತಾರೆ. ಅತಿಥಿಗಳು, ಆತಿಥೇಯರು, ಕಾರ್ಯಕರ್ತರೂ, ನೆನಪಿಡಬೇಕಾದುದೇನೆಂದರೆ ಜಲ್ಸದ ಮೂರು ದಿನಗಳು ಅವರ ವಿಶ್ವಾಸಗಳಿಗೆ ಸಂಬಂಧಿಸಿ ಮತ್ತು ಕರ್ಮಗಳಿಗೆ ಸಂಬಂಧಿಸಿ ಉತ್ತಮ ತರಬೇತಿ ನೀಡುವ ತರಬೇತಿ ಶಿಬಿರವಾಗಿದೆ ಎಂದು. ಆದುದರಿಂದ ಇದರಿಂದ ಧಾರಾಳ ಲಾಭಗಳಿಸಲು ಪ್ರಯತ್ನಿಸಬೇಕು. ಮತ್ತು ನಿಮ್ಮ ಎಲ್ಲಾ ಶಕ್ತಿಗಳೊಂದಿಗೆ ಮತ್ತು ಲಕ್ಷ್ಯಗೊಟ್ಟು ಈ ಜಲ್ಸದಲ್ಲಿ ಭಾಗವಹಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಉದ್ದೇಶದ ಬಗ್ಗೆ ಏನು ಪ್ರಸ್ತಾಪಿಸಿರುವರೋ ಆ ಉದ್ದೇಶವನ್ನು ನಾವು ನಮ್ಮ ಮುಂದೆ ಇರಿಸಿ ಕಾರ್ಯೋನ್ಮುಖರಾಗಬೇಕು. ಜಲ್ಸದ ಆಧ್ಯಾತ್ಮಿಕ ವಾತಾವರಣದಲ್ಲಿ ಉತ್ತಮ ಮಾದರಿಯನ್ನು ತನ್ನ ಅನುಯಾಯಿಗಳ ಮುಂದೆ ಇರಿಸಿ ಅದರ ಪ್ರಕಾರ ವರ್ತಿಸುವಂತೆ ಮಾಡಿ ಅವರನ್ನು ಲೋಕದ ಜನರು ಹಿಂಬಾಲಿಸುವಂತೆ ಮಾಡುವುದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಶಿಸಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: "ನನ್ನನ್ನು ನಂಬುವವರ ಹೃದಯಗಳು ಪರಲೋಕದ ಕಡೆಗೆ ಸಂಪೂರ್ಣವಾಗಿ ಬಾಗಿರಲಿ". ಇದರ ಅರ್ಥವೇನೆಂದರೆ ಅವರ ಅನುಯಾಯಿಗಳಿಗೆ ಯಾವಾಗಲೂ ಪರಲೋಕದ ಬಗ್ಗೆ ಚಿಂತೆ ಇರಬೇಕು. ಇದು ಸಾಮಾನ್ಯವಾದ ಕೆಲಸವೇನೂ ಅಲ್ಲ. ಮನುಷ್ಯನು ಕೇವಲ ತನ್ನ ಪ್ರಯತ್ನದಿಂದ ಈ ಸ್ಥಾನವನ್ನು ಗಳಿಸಲಾರ. ಇದನ್ನು ಗಳಿಸಲು ಕರ್ಮಪರವಾಗಿ ಕೆಲಸ ಮಾಡುವುದರೊಂದಿಗೆ ಅದರ ಬಗ್ಗೆ ಪ್ರಾರ್ಥನೆ ಸಹ ಮಾಡಬೇಕಾಗಿದೆ. "ಓ ಅಲ್ಲಾಹ್ ಲೌಕಿಕ ಸಮಸ್ಯೆಗಳು ಮತ್ತು ಅಡಚಣೆಗಳು ಹೆಜ್ಜೆ ಹೆಜ್ಜೆಗೆ ನನ್ನ ಪ್ರಗತಿಯ ಮಾರ್ಗವನ್ನು ತಡೆಗಟ್ಟುತ್ತಾ ಇವೆ. ನಿನ್ನ ಅನುಗ್ರಹದ ಮೂಲಕ ನಿನ್ನ ಸಂಪ್ರೀತಿ ಗಳಿಸುವ ಮಾರ್ಗದಲ್ಲಿ ನನ್ನನ್ನು ಚಲಿಸುವಂತೆ ಮಾಡು. ಪ್ರೀತಿಸುವವನ ಹೃದಯುದಲ್ಲಿ ತಾನು ಪ್ರೀತಿಸುವ ವ್ಯಕ್ತಿಯ ಬಗ್ಗೆ ಪ್ರೀತಿ ತುಂಬಿರುವ ಹಾಗೆ ನನ್ನ ಹೃದಯುದಲ್ಲಿ ನಿನ್ನ ಬಗ್ಗೆ ಪ್ರೀತಿಯನ್ನು ತುಂಬಿಸು. ಈ ಭಯ ಅಕ್ರಮದ ಕಾರಣದಿಂದ ಹುಟ್ಟಿದುದಲ್ಲ. ಇದು ಪ್ರೀತಿಯ ಕಾರಣದಿಂದ ಹುಟ್ಟಿದುದಾಗಿದೆ. ನನ್ನ ಯಾವುದೇ ಕೆಲಸ ನಿನ್ನ ಕೋಪಕ್ಕೆ ಕಾರಣವಾಗದಿರಲಿ. ನೀನು ಆಜ್ಞಾಪಿಸಿರುವ

ಒಳಿತುಗಳನ್ನು ಮಾಡುವುದರ ಕಡೆಗೆ ನನ್ನ ಹೆಜ್ಜೆ ಎತ್ತಲ್ಪಡಲಿ. ಯಾವ ಕೆಲಸ ಮಾಡಬಾರದೆಂದು ನೀನು ಆಜ್ಞಾಪಿಸಿರುವೆಯೋ ಆ ಕೆಲಸದ ಬಗ್ಗೆ ಯೋಚಿಸುವುದನ್ನು ನಾನು ದ್ವೇಷಿಸುತ್ತಾ ಅದನ್ನು ನನ್ನ ಮನಸ್ಸಿನಿಂದ ಹೊರಹಾಕುವವನನ್ನಾಗಿ ನನ್ನನ್ನು ಮಾಡು. **ತಖ್ವ**ವನ್ನು(ದೇವ ಭಯವನ್ನು) ಅವಲಂಬಿಸಿ **ಹುಖೂಖುಲ್ ಇಬಾದ್**(ಸೃಷ್ಟಿಗಳ ಹಕ್ಕುಗಳನ್ನು) ಈಡೇರಿಸುವುದರೊಂದಿಗೆ **ಹುಖೂಖುಲ್ಲಾಹ್**(ಅಲ್ಲಾಹನ ಹಕ್ಕುಗಳು) ಈಡೇರಿಸುವ ಬಗ್ಗೆ ಯಾವಾಗಲೂ ಗಮನಿಸುವವನನ್ನಾಗಿ ನನ್ನನ್ನು ಮಾಡು. ನನ್ನ ಜೀವಿತದ ಉದ್ದೇಶವೇನೆಂದು ಹೇಳಲಾಗಿದೆಯೋ ಅದನ್ನು ಗಳಿಸುವವನನ್ನಾಗಿ ನನ್ನನ್ನು ಮಾಡು. ನೀನು ನಿನ್ನ ದಾಸರಿಂದ ಆರಾಧನೆಯ ಯಾವ ಮಟ್ಟವನ್ನು ಬಯಸುತ್ತಿರುವಿಯೋ ಅದನ್ನು ಗಳಿಸುವಂತೆ ಮಾಡು. ನಾನು ಸದ್ಗುಣಗಳನ್ನು ಹೇಗೆ ಪ್ರಕಟಿಸುವವನಾಗಬೇಕೆಂದರೆ ಜನರು ಅದನ್ನು ಅನುಕರಿಸಲು ಹೆಮ್ಮೆ ಪಡುವಂತಿರಬೇಕು''. ಈ ಜಲ್ಸದಲ್ಲಿ ಭಾಗವಹಿಸುವವರು ತಮ್ಮ ಪ್ರಾರ್ಥನೆಗಳನ್ನೂ ಯೋಚನೆಗಳನ್ನೂ ಈ ರೀತಿ ಪರಿವರ್ತಿಸುವ ಆವಶ್ಯಕತೆ ಇದೆ. ಅಲ್ಲಾಹನು ನಮಗೆ ಆರಾಧಿಸುವ ವಿಧಾನವನ್ನು ಕಲಿಸಿಕೊಟ್ಟು ಅದರ ಮಟ್ಟವನ್ನು ಉತ್ತಮ ಪಡಿಸುವ ಮಾರ್ಗಗಳನ್ನು ತೋರಿಸಿ ಬಹಳ ಉಪಕಾರ ಮಾಡಿರುವನು. **ಹುಖೂಖುಲ್ ಇಬಾದ್**ಗೆ ಸಂಬಂಧಿಸಿರುವಂತಹ ಸದ್ಗುಣಗಳ ಬಗ್ಗೆ ಸಹ ಅಲ್ಲಾಹನು ಸೂಚಿಸಿರುವನು. ಶ್ರೇಷ್ಠ ನೈತಿಕ ಗುಣಗಳನ್ನು ಪ್ರಕಟಿಸುವುದು ಜಲ್ಸದಲ್ಲಿ ಭಾಗವಹಿಸುವವರಿಗೆ ಆವಶ್ಯಕವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿರುವರು:

**"ನಾನು ಸತ್ಯವಾಗಿ ಹೇಳುತ್ತೇನೆ. ತನ್ನ ಸುಖಕ್ಕಿಂತ ತನ್ನ ಸಹೋದರನ ಸುಖಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಆದ್ಯತೆ ನೀಡದೆ ಇರುವವನ ಸತ್ಯವಿಶ್ವಾಸ ಖಂಡಿತವಾಗಿಯೂ ಸರಿಯಾಗಿರಲಾರದು."**

ಇದು ಸಾಮಾನ್ಯವಾದ ವಿಷಯವೇನೂ ಅಲ್ಲ. ಅನೇಕ ಜನರು ಅನ್ಯರಿಗೆ ಸುಖ ನೀಡುವ ಬಗ್ಗೆ ಯೋಚಿಸುತ್ತಾರೆ. ಅಂದರೆ ತಮ್ಮ ಸಾಧ್ಯತೆಗಳಿಗನುಸಾರವಾಗಿ ತಮ್ಮ ಸುಖಕ್ಕೆ ಭಂಗ ಉಂಟಾಗದ ರೀತಿಯಲ್ಲಿ ಅನ್ಯರಿಗೆ ಸುಖ ನೀಡಲು ಪ್ರಯತ್ನಿಸುತ್ತಾರೆ. ಆದರೆ ತನ್ನ ಸುಖಕ್ಕಿಂತ ಅನ್ಯರಿಗೆ ಸುಖ ನೀಡುವುದಕ್ಕೆ ಆದ್ಯತೆ ನೀಡುವವರು ಬಹಳ ಕಡಿಮೆ ಇದ್ದಾರೆ. ರಕ್ತ ಸಂಬಂಧಿಗಳಿಗಾಗಿ ತಮ್ಮ ಸುಖವನ್ನು ತ್ಯಾಗ ಮಾಡುವವರು ಇರುತ್ತಾರೆ. ಆದರೆ, ಅನ್ಯರಿಗಾಗಿ ತಮ್ಮ ಸುಖವನ್ನು ತ್ಯಜಿಸುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇಂತಹ ರೀತಿಯ ತ್ಯಾಗ ಮಾಡುವುದು ಬಹಳ ಕಷ್ಟಕರವಾಗಿದೆ. ಅನ್ಯರ ಕಷ್ಟವನ್ನು ತನ್ನ ಸ್ವಂತ ಕಷ್ಟದ ಹಾಗೆ ತಿಳಿದುಕೊಳ್ಳುವ ತನಕ ವಾಸ್ತವಿಕ ಸತ್ಯ ವಿಶ್ವಾಸಿಯಾಗಲು ಸಾಧ್ಯವಿಲ್ಲವೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು. ಒಂದೆಡೆ ಅವರು ಹೇಳಿರುವರು: **"ನನ್ನ ರೋಗಿಯಾದ ಸಹೋದರ ರೋಗದಿಂದ ಕಷ್ಟಪಡುತ್ತಾ ಇರುವಾಗ ನಾನು ನಿಶ್ಚಿಂತೆಯಿಂದ ನಿದ್ರಿಸುವುದಾದರೆ ನನ್ನ ಸ್ಥಿತಿಯ ಬಗ್ಗೆ ಖೇದವಾಗುತ್ತದೆ. ಅವನ ಕಷ್ಟನಿವಾರಣೆಯಾಗಲು ನನಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡುವುದು ನನ್ನ ಕಡ್ಡಾಯ ಕರ್ತವ್ಯವಾಗಿದೆ. ನನ್ನ ಧರ್ಮಕ್ಕೆ ಸೇರಿದ ಸಹೋದರನು ತನ್ನ ಸ್ವಾರ್ಥದ ಕಾರಣದಿಂದ ನನ್ನನ್ನು ನಿಂದಿಸಿದಾಗ ನಾನು ಅವನೊಂದಿಗೆ ಕಠಿಣವಾಗಿ ವರ್ತಿಸಿದರೆ ನನ್ನ ಸ್ಥಿತಿ ಸಹ ಖೇದಕರವಾಗಿದೆ. ಆಗ ನನ್ನ ಕರ್ತವ್ಯವೇನೆಂದರೆ ನಾನು ಸಹನೆಯಿಂದ ವರ್ತಿಸಬೇಕು. ನಾನು ಅವನಿಗೋಸ್ಕರ ಅಳುತ್ತಾ ಪ್ರಾರ್ಥಿಸಬೇಕು. ಈ ವ್ಯಕ್ತಿ ಆಧ್ಯಾತ್ಮಿಕವಾಗಿ ರೋಗ ಬಾಧಿತನಾಗಿದ್ದಾನೆ ಅಲ್ಲಾಹನು ಅವನ ರೋಗವನ್ನು ಗುಣಪಡಿಸಲಿ ಎಂದು."**

ಇದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳಿಗೆ ಆಜ್ಞಾಪಿಸಿದುದೇ ಆಗಿದೆ. ಅಲ್ಲಾಹನು ಸತ್ಯವಿಶ್ವಾಸಿಗಳ ಬಗ್ಗೆ **"ರುಹಮಾಉ ಬೈನಹುಮ್"** ಸತ್ಯವಿಶ್ವಾಸಿಗಳು ಪರಸ್ಪರ ದಯಾ ಭಾವನೆಯಿಂದ ವರ್ತಿಸುವವರಾಗಿದ್ದಾರೆ ಎಂದು ಹೇಳಿರುವನು. ಅವರು ಹೊಂದಿರುವ ದಯೆಯ ಕಾರಣ ಒಬ್ಬರು ಇನ್ನೊಬ್ಬರ ನೋವನ್ನು ಅನುಭವಿಸುತ್ತಾರೆ. ಅವರು ಈ ಕಾರಣದಿಂದ ಪರಸ್ಪರ ನೋವನ್ನು ನಿವಾರಿಸಲು ಕಾರ್ಯೋನ್ಮುಖರಾಗುತ್ತಾರೆ ಮತ್ತು ಅದರ ಬಗ್ಗೆ ಪ್ರಾರ್ಥಿಸುತ್ತಾರೆ.

ನಮ್ಮ ಪೈಕಿ ಎಷ್ಟು ಜನರು ಇಂತಹ ಉನ್ನತ ಮಟ್ಟದ ಸ್ವಭಾವ ಗುಣಗಳನ್ನು ಹೊಂದಲು ಪ್ರಯತ್ನಿಸುತ್ತಿದ್ದಾರೆ ಎನ್ನುವುದನ್ನು ಸ್ವಯಂ ಪರಿಶೀಲಿಸಬೇಕು. ನಾವು ಈ ಉಪದೇಶವನ್ನು ಅನುಸರಿಸಿ ವರ್ತಿಸುವವರಾದರೆ ನಮ್ಮ ಮಧ್ಯೆ ಇರುವ ಚಿಕ್ಕ ದೊಡ್ಡ ಜಗಳಗಳೆಲ್ಲವೂ ಕೊನೆಗೊಳ್ಳುವುವು. ನಮಗೆ ಹೆಜ್ಜೆ ಹೆಜ್ಜೆಗಳಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾರ್ಗದರ್ಶನ ದೊರಕುತ್ತಾ ಇರುವುದರಿಂದ ನಾವು ಅದೃಷ್ಟ ಶಾಲಿಗಳಾಗಿದ್ದೇವೆ. ನಮಗೆ ಇಸ್ಲಾಮ್ ಬಗ್ಗೆ ಮತ್ತು ತಖ್ವದ ಬಗ್ಗೆ ವಾಸ್ತವಿಕಾಂಶಗಳು ತಿಳಿಯುತ್ತವೆ. ಯಾರನ್ನು ಹಿಂಬಾಲಿಸಬೇಕು ಯಾರನ್ನು ಹಿಂಬಾಲಿಸಬಾರದು ಎಂದು ತಿಳಿದುಕೊಳ್ಳದ ಚದುರಿಹೋದ ಮುಸ್ಲಿಮರ ಹಾಗೆ ನಾವಿಲ್ಲ. ಅವರಿಗೆ ತಪ್ಪು ಮಾರ್ಗದರ್ಶನ ನೀಡುತ್ತಿರುವ, ಅವರ ನಾಯಕರೆಂದೂ ಧಾರ್ಮಿಕ ಮಾರ್ಗದರ್ಶಕರೆಂದೂ ಹೇಳುತ್ತಿರುವ ಮುಖಂಡರು ಒಬ್ಬರಿನ್ನೊಬ್ಬರ ಕತ್ತು ಕತ್ತರಿಸುವುದರಲ್ಲಿ ಮುಂದುವರಿಯುವಂತೆ ಮಾಡುತ್ತಿದ್ದಾರೆ. ನೀವು ಆ ಜನರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ವಿವೇಕ ನೀಡಲಿ. ಅವರು ತಮ್ಮ ಕೃತ್ಯಗಳ ಕಾರಣದಿಂದ ಅಲ್ಲಾಹನ ಕಠಿಣ ಕ್ರೋಧಕ್ಕೆ ಪಾತ್ರವಾಗುವಂತಾಗದಿರಲಿ. ಈ ಜನರು ಇಸ್ಲಾಮ್ ಧರ್ಮದ ಬಗ್ಗೆ ತಪ್ಪು ಚಿತ್ರಣ ನೀಡಿ ಇಸ್ಲಾಮ್ ಧರ್ಮಕ್ಕೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೂ ಅಪಕೀರ್ತಿ ಉಂಟಾಗುವಂತೆ ಪ್ರಯತ್ನಿಸುವವರಾಗದಿರಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತನ್ನನ್ನು ನಂಬುವವರ ಬಗ್ಗೆ ಹೀಗೆ ವರ್ಣಿಸಿದ್ದಾರೆ: ಯಾರ ನಾಲಗೆಯಿಂದಲೂ ಕೈಯಿಂದಲೂ ಪ್ರತಿಯೊಬ್ಬ ಮುಸ್ಲಿಮನು ಮತ್ತು ಶಾಂತಿಯನ್ನು ನೀಡುವ ಪ್ರತಿಯೊಬ್ಬನು ಸುರಕ್ಷಿತನಾಗಿರುವನೋ ಅವನೇ ನಿಜವಾದ ಮುಸ್ಲಿಮನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ: ನಿಜವಾಗಿ ಮುಸ್ಲಿಮನಾದವನಿಂದ ಅವನ ಧರ್ಮದವರು ಮಾತ್ರವಲ್ಲ ಅನ್ಯ ಧರ್ಮದ ಜನರು ಸಹ ಸುರಕ್ಷಿತರಾಗಿ ಶಾಂತಿಯಿಂದಿರುತ್ತಾರೆ.

ಪವಿತ್ರ ಖುರ್‌ಆನ್ ಉನ್ನತ ಸ್ವಭಾವ ಗುಣಗಳ ಬಗ್ಗೆ ಪ್ರಸ್ತಾಪಿಸಿದೆ. ಅವುಗಳಲ್ಲಿ ಕೆಲವು ನಾನು ವಿವರಿಸುತ್ತೇನೆ. ಪವಿತ್ರ ಖುರ್‌ಆನಿನ ಒಂದು ವಚನ ಹೀಗಿದೆ: **ಕುನ್‌ತುಮ್ ಖೈರ ಉಮ್ಮತಿನ್ ಉಖ್‌ರಿಜತ್ ಲಿನ್ನಾಸಿ ತಅ್‌ಮುರೂನ ಬಿಲ್ ಮಅರೂಫಿ ವ**

**ತನ್‌ಹೌನ ಅನಿಲ್ ಮುನ್‌ಕರಿ.** "ಜನರಿಗೆ ಪ್ರಯೋಜನವನ್ನುಂಟುಮಾಡಲು ಸೃಷ್ಟಿಸಲಾದ ಎಲ್ಲರಿಗಿಂತ ಉತ್ತಮ ಸಮುದಾಯ ನೀವಾಗಿರುವಿರಿ. ನೀವು ಒಳ್ಳೆಯದರ ಉಪದೇಶ ನೀಡುತ್ತಿರುವಿರಿ ಮತ್ತು ಕೆಡುಕಿನಿಂದ ತಡೆಯುತ್ತಿರುವಿರಿ."

ಈ ವಚನದಿಂದ ಸ್ಪಷ್ಟವಾಗುವುದೇನೆಂದರೆ ಸತ್ಯವಿಶ್ವಾಸಿಯ ಚಿಹ್ನೆ ಎಂದರೆ, ಮುಸ್ಲಿಮ್ ಸಮುದಾಯದ ಸದಸ್ಯರಾದವರ ಚಿಹ್ನೆ ಏನೆಂದರೆ ಅವರು ಒಳಿತನ್ನು ಉಪದೇಶಿಸುವವರೂ ಕೆಡುಕಿನಿಂದ ತಡೆಯುವವರೂ ಆಗಿರುತ್ತಾರೆ. ಅವರು ಅನ್ಯರಿಗೆ ಪ್ರಯೋಜನಕಾರಿಗಳಾಗಿರುತ್ತಾರೆ. ಅನ್ಯರನ್ನು ನಷ್ಟದಿಂದ ರಕ್ಷಿಸುವವರಾಗಿರುತ್ತಾರೆ. ಈಗ ಕೆಲವು ದಿನಗಳ ಹಿಂದೆ ಲೋಕದಲ್ಲಿ ದಾನ ಧರ್ಮ ನೀಡುವವರ ಬಗ್ಗೆ ಸಮೀಕ್ಷೆ ನಡೆಯಿತು. ವಿವಿಧ ಧರ್ಮಗಳ ಜನರನ್ನು ಪರಸ್ಪರ ಹೋಲಿಸಿ ಸಮೀಕ್ಷೆ ನಡೆಸಲಾಯಿತು. ಸಮೀಕ್ಷೆಯಿಂದ ತಿಳಿದು ಬಂದುದೇನೆಂದರೆ ದಾನಧರ್ಮ ನೀಡುವುದರಲ್ಲಿ ಮುಸ್ಲಿಮರು ಇತರ ಎಲ್ಲರಿಗಿಂತ ಮುಂದೆ ಇದ್ದಾರೆ. ದಾನಧರ್ಮ ನೀಡುವ ಬಗ್ಗೆ ಇಸ್ಲಾಮ್ ಧರ್ಮ ಆಜ್ಞಾಪಿಸುವ ಕಾರಣ ಮುಸ್ಲಿಮರಲ್ಲಿ ಈ ಸದ್ಗುಣ ಜಾರಿಗೊಂಡಿದೆ. ಮುಸ್ಲಿಮರು ಇಸ್ಲಾಮ್ ಧರ್ಮ ಆಜ್ಞಾಪಿಸಿದ ಇತರ ಒಳಿತುಗಳನ್ನು ಸಹ ಮಾಡುವವರಾಗಲಿ ಎಂದು ಅಲ್ಲಾಹನನ್ನು ಪ್ರಾರ್ಥಿಸುವ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ ಅವರು ತಮ್ಮ ಹಿತಕ್ಕಿಂತ ಅನ್ಯರ ಹಿತಕ್ಕೆ ಆದ್ಯತೆ ನೀಡುತ್ತಾರೆಂದು ಹೇಳಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಬಗ್ಗೆ ಹೀಗೆ ಹೇಳುತ್ತಾರೆ: ಜಲ್ಸದ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಒಂದು ಸ್ಥಳದಲ್ಲಿ ಜಮಾಯಿಸುವಾಗ ಕೆಲವು ಅಡಚಣೆಗಳು ತಲೆ ದೋರುತ್ತವೆ. ಇಂತಹ ಸಂದರ್ಭಗಳಲ್ಲಿ ನೈಜ ಅಹ್ಮದಿ ಮಾಡಬೇಕಾದುದೇನೆಂದರೆ ತನ್ನ ಆವಶ್ಯಕತೆಗಳನ್ನು ಅನ್ಯರಿಗೋಸ್ಕರ ತ್ಯಜಿಸಬೇಕು. ಪ್ರೀತಿಯನ್ನು ತೋರಿಸಿ ಮಾದರಿಯಾಗಬೇಕು. ಕೇವಲ ತ್ಯಾಗ ಮಾಡಿದರೆ ಸಾಕಾಗಲಾರದು ಅದರಲ್ಲಿ ಪ್ರೀತಿ ವಾತ್ಸಲ್ಯ ಸಹ ಪ್ರಕಟವಾಗಬೇಕು.

ಅಲ್ಲಾಹನಿಗೆ ವಿನಯ ಬಹಳ ಇಷ್ಟಕರವಾಗಿದೆ. ಸತ್ಯವಿಶ್ವಾಸಿಗೆ ವಿನಯದ ಬಗ್ಗೆ ಉಪದೇಶಿಸಲಾಗಿದೆ. ಕೆಲವು ಸಮಸ್ಯೆಗಳು ಹುಟ್ಟುವುದು ಹೇಗೆಂದರೆ ಒಂದು ಸ್ಥಳದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸುವಾಗ ಯಾವುದಾದರೂ ಸಮಸ್ಯೆ ತಲೆದೋರಿದಾಗ ಆ ಸಮಸ್ಯೆಯನ್ನು ಪರಿಹರಿಸಲು ದುರಹಂಕಾರ ತಡೆಯಾಗುತ್ತದೆ. ಓರ್ವ ಅಹ್ಮದಿ ವಿನಯವನ್ನು ಹೊಂದುವುದರ ಬಗ್ಗೆ ವಿಶಿಷ್ಟವಾಗಿ ಆಸಕ್ತನಾಗಬೇಕು. ಏಕೆಂದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಗುಣವನ್ನು ಮೆಚ್ಚಿರುವನು. **"ನಿನ್ನ ವಿನಯಭರಿತ ವರ್ತನೆಗಳು ಅಲ್ಲಾಹನಿಗೆ ಇಷ್ಟವಾದುವು"** ಎಂಬ ಸಂದೇಶವಾಣಿ ಅವರಿಗೆ ಲಭಿಸಿತ್ತು. ನಾವೆಲ್ಲರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧ ಹೊಂದಿರುವೆವು ಎಂದು ವಾದಿಸುತ್ತಿರುವಾಗ ಈ ಸದ್ಗುಣವನ್ನು ಸಹ ಹೊಂದಿರಬೇಕಾದುದು ಆವಶ್ಯಕವಾಗಿದೆ. ಇದೇ ರೀತಿ ಒಳ್ಳೆಯ ಅಭಿಪ್ರಾಯ ಪ್ರಕಟಣೆ ಮತ್ತು ಸತ್ಯ ಹೇಳುವುದು ಆವಶ್ಯಕವಾಗಿವೆ. ಎಲ್ಲಾ ಸಂದರ್ಭಗಳಲ್ಲೂ ಸತ್ಯಪಾಲನೆ ಆವಶ್ಯಕವಾಗಿದೆ. ಸತ್ಯ ಹೇಳುವ ಮಟ್ಟ ಹೇಗಿರಬೇಕೆಂದರೆ ತನ್ನ ಸ್ವಂತದ ವಿರುದ್ಧ ಅಥವಾ ತನಗೆ ಪ್ರಿಯರಾದವರ ವಿರುದ್ಧ ಸಾಕ್ಷ್ಯ ಹೇಳಬೇಕಾದ ಸಂದರ್ಭದಲ್ಲಿ ಸಹ ಸತ್ಯವನ್ನು ಕೈಬಿಡಬಾರದು. ಇದೇ ರೀತಿ ಕ್ಷಮಿಸಬೇಕು ಮತ್ತು ಸಹನೆ ದೋರಬೇಕು ಎಂದೂ ಉಪದೇಶಿಸಲಾಗಿದೆ. ಈ ಎಲ್ಲಾ ಸದ್ಗುಣಗಳನ್ನು ನಾವು ಹೊಂದಲು ಪ್ರಯತ್ನಿಸಬೇಕು. ಜಲ್ಸದಂತಹ ಸಂದರ್ಭಗಳಲ್ಲಿ ಇಂತಹ ಸದ್ಗುಣಗಳನ್ನು ಪ್ರಕಟಿಸಬೇಕಾದುದು ಅತೀ ಅಗತ್ಯವಾಗಿದೆ. ಬಹಳ ಜನರು ಜಮಾಯಿಸುವಾಗ ಈ ಗುಣಗಳು ಪರೀಕ್ಷಿಸಲ್ಪಡುತ್ತವೆ. ಜನರ ಸ್ವಭಾವ ಗುಣಗಳು ಬೆಳಕಿಗೆ ಬರುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ತನ್ನ ಅನುಯಾಯಿಗಳು ಇಂತಹ ಸದ್ಗುಣಗಳನ್ನು ಹೊಂದಬೇಕೆಂದು ಉಪದೇಶಿಸಿದ್ದರು. ನ್ಯಾಯಪಾಲನೆ ಬಗ್ಗೆ ಸಹ ಪವಿತ್ರ ಖುರ್‌ಆನ್ ಉಪದೇಶಿಸಿದ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉಪದೇಶಿಸಿದ್ದಾರೆ. ನ್ಯಾಯಪಾಲನೆ ಮತ್ತು ಪರೋಪಕಾರದ ಬಗ್ಗೆ ಪವಿತ್ರ ಖುರ್‌ಆನ್ ಉಪದೇಶಿಸಿದ ಉನ್ನತ ಮಟ್ಟದ ಉಪದೇಶ ಇತರ ಯಾವ ಧಾರ್ಮಿಕ ಗ್ರಂಥಗಳಲ್ಲೂ ಇರುವುದಿಲ್ಲ. ಶತ್ರುಗಳ ಶತ್ರುತ್ವ ಸಹ ಸತ್ಯವಿಶ್ವಾಸಿಗಳನ್ನು ನ್ಯಾಯಪಾಲನೆಯಿಂದ ತಡೆಯಬಾರದು ಎಂದು ಪವಿತ್ರ ಖುರ್‌ಆನ್ ಹೇಳಿದೆ. ಇದು ಇಸ್ಲಾಮಿನ ವೈಶಿಷ್ಟತೆಯಾಗಿದೆ. ಮತ್ತು ಸತ್ಯವಿಶ್ವಾಸಿ ವಿಶಿಷ್ಟವಾಗಿ ಹೊಂದಬೇಕಾದ ಸದ್ಗುಣವಾಗಿದೆ. ಈ ಎಲ್ಲಾ ಒಳಿತುಗಳನ್ನು ಹೊಂದಬೇಕೆಂದು ನಮಗೆ ಆಜ್ಞಾಪಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜಲ್ಸಕ್ಕೆ ಬಹಳ ಸಂಖ್ಯೆಯಲ್ಲಿ ಜನರು ಆಗಮಿಸುವಾಗ ಸದ್ಗುಣಗಳನ್ನು ವಾಸ್ತವಿಕ ರೂಪದಲ್ಲಿ ಪ್ರಕಟಿಸಬೇಕು. ಹೀಗೆ ಸದ್ಗುಣಗಳನ್ನು ಪ್ರಕಟಿಸುವಾಗ ಅವುಗಳ ಬಗ್ಗೆ ಜನರಿಗೆ ತಿಳಿಯುತ್ತದೆ. ನಾವು ಉನ್ನತ ಮಟ್ಟದ ಸದ್ಗುಣಗಳನ್ನು ಪ್ರಕಟಿಸುವಾಗ ಇಸ್ಲಾಮಿನ ಸುಂದರ ಉಪದೇಶಗಳನ್ನು ನಾವು ಜನರ ಮುಂದಿರಿಸುವವರಾಗುವೆವು. ಈ ಮಾದರಿ ವರ್ತನೆ ಅಹ್ಮದಿಯಾ ಜಮಾಅತಿನ ತಬ್ಲೀಗ್‌ಗೆ ಸಹ ಸಹಾಯಕವಾಗುತ್ತದೆ. ಸದ್ಗುಣಗಳ ಪ್ರಕಟಣೆ ಅಹ್ಮದಿಯರ ವೈಶಿಷ್ಟ್ಯವಾಗಿದೆ. ಅಹ್ಮದಿಯರ ಉನ್ನತ ಮಟ್ಟದ ಸ್ವಭಾವ ಗುಣಗಳನ್ನು ಕಂಡು ಬಹಳ ಜನರು ಅಹ್ಮದಿಯತ್ ಬಗ್ಗೆ ಒಲವು ಹೊಂದಿದವರಾಗುತ್ತಾರೆ. ನಿಮ್ಮ ಪೈಕಿ ಹಲವರ ಹಿರಿಯರು ಜಲ್ಸದ ಅನುಗ್ರಹದ ಕಾರಣ ಅಹ್ಮದಿಯಾ ಜಮಾಅತಿನಲ್ಲಿ ಸೇರಿದವರಾಗಿರಬಹುದು. ಈಗ ಎರಡು ತಿಂಗಳ ಹಿಂದೆ ಜರ್ಮನಿಯಲ್ಲಿ ವಾರ್ಷಿಕ ಜಲ್ಸ ಜರಗಿದಾಗ ಮುಸ್ಲಿಮೇತರರಾದ ಪತಿ ಪತ್ನಿಯರು ಆ ಜಲ್ಸದಲ್ಲಿ ಸಮೀಪದ ಒಂದು ದೇಶದಿಂದ ಆಗಮಿಸಿದ್ದರು. ಅವರಿಗೆ ಇಸ್ಲಾಮ್ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಅವರಿಗೆ ಕೆಲವು ಅಹ್ಮದಿಯರ ಪರಿಚಯವಿತ್ತು. ಅಹ್ಮದಿಯರು ಇಸ್ಲಾಮ್ ಶಾಂತಿಯ ಧರ್ಮ ಎಂದು ಹೇಳುತ್ತಾರೆ. ಅದರ ಬಗ್ಗೆ ಬಹಳ ಹೊಗಳುತ್ತಾರೆ. ಅದನ್ನು ಒಮ್ಮೆ ನೋಡಿ ಬಿಡೋಣ ಎಂದು ಅವರು ಆಗಮಿಸಿದ್ದರು. ಅವರ ಉದ್ದೇಶ ಏನಾದರೂ ಕೊರತೆ ನ್ಯೂನತೆಯನ್ನು ಕಂಡು ಹಿಡಿದು ಇಸ್ಲಾಮನ್ನು ಆಕ್ಷೇಪಿಸುವುದಾಗಿತ್ತು. ಇಸ್ಲಾಮಿನಿಂದ ಪ್ರಭಾವಿತರಾಗುವ ಉದ್ದೇಶ ಅವರಿಗಿರಲಿಲ್ಲ. ಆದರೆ ಅವರಿಬ್ಬರು ಬಂದು ಜರ್ಮನಿಯ ಜಲ್ಸದ ವ್ಯವಸ್ಥೆಯಿಂದ ಬಹಳಷ್ಟು ಪ್ರಭಾವಿತರಾದರು. ಅವರು ಬೈಅತ್ ಮಾಡಿ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಕೆಲವರು ಹೀಗೆ ಹೇಳುತ್ತಾರೆ. ಬೈಅತ್ ಮಾಡುವ ದೃಶ್ಯವನ್ನು ಕಾಣುವಾಗ ಬೈಅತ್ ಮಾಡುವ ನಿರ್ಧಾರ ಪಕ್ಕನೆ ತಲೆದೋರುತ್ತದೆ. ನಾವು ಬೈಅತ್ ಮಾಡುವವರೊಂದಿಗೆ ಸೇರುತ್ತೇವೆ ಎಂದು. ಆದರೆ ನಮ್ಮ ಪೈಕಿ ಬಹುತೇಕ ಜನರ ವರ್ತನೆಯ ಉದಾಹರಣೆ ಬೇರೆ ರೀತಿಯಲ್ಲಿರುತ್ತಿದ್ದರೆ ಇಂತಹ ಜನರಲ್ಲಿ ಆ ತಾತ್ಕಾಲಿಕವಾದ ಭಾವನೆ ತಲೆದೋರುತ್ತಿರಲಿಲ್ಲ. ಅದು ಹೃದಯವನ್ನು ಪ್ರಭಾವಿಸುವಂತಹದೂ

ಆಗುತ್ತಿರಲಿಲ್ಲ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬನು ಮೌನವಾಗಿ ತಬ್ಲೀಗ್ ಮಾಡುತ್ತಾನೆ. ಕಾರ್ಯಕರ್ತರು ಮಾತ್ರವಲ್ಲ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬನೂ ಅನ್ಯರನ್ನು ಪ್ರಭಾವಿಸುತ್ತಾನೆ. ಆದುದರಿಂದ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ, ವೃದ್ಧ ಮತ್ತು ಮಕ್ಕಳು ಅನ್ಯರನ್ನು ಪ್ರಭಾವಿಸುವಂತಹ ಉತ್ತಮ ಮಾದರಿಯನ್ನು ಪ್ರಕಟಿಸಬೇಕು. ಈ ಮಾದರಿ ತಾತ್ಕಾಲಿಕವಾಗಿರಬಾರದು. ನಿಮ್ಮೊಳಗೆ ಎಂತಹ ಬದಲಾವಣೆ ಉಂಟುಮಾಡಬೇಕೆಂದರೆ ನಾವು ನೈಜ ಮುಸ್ಲಿಮರಾಗಬೇಕು. ನಮ್ಮ ಪೈಕಿ ಪ್ರತಿ ಒಬ್ಬನು ತನ್ನ ಮಹತ್ವವನ್ನೂ ಹೊಣೆಗಾರಿಕೆಗಳನ್ನೂ ಅರಿತುಕೊಳ್ಳುವ ಆವಶ್ಯಕತೆ ಇರುತ್ತದೆ. ನಾವು ಜಲ್ಸದಿಂದ ವಾಸ್ತವಿಕವಾಗಿ ಅನುಗ್ರಹ ಗಳಿಸಬೇಕು. ನಾವು ವಾಸ್ತವಿಕವಾಗಿ ಮುಸ್ಲಿಮರಾಗಬೇಕು. ಉನ್ನತ ನೈತಿಕ ಗುಣಗಳಿಗೆ ಸಂಬಂಧಿಸಿ ಮುಸ್ಲಿಮರಿಗೆ ಆಜ್ಞಾಪಿಸಿರುವುದೇನೆಂದರೆ ಶಾಂತಿಯ ಸಂದೇಶ ಎಲ್ಲೆಡೆ ಪ್ರಸರಿಸಿರಿ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಹೇಳಿದರು:

**ತಖ್‌ರಉಸ್ಸಲಾಮು ಅಲಾ ಮನ್ ಅರಫ್ತ ವ ಮನ್ ಲಮ್ ತಅ್‌ರಿಫು.**

ನಿಮಗೆ ಪರಿಚಯವಿರುವವನಿಗೂ ನಿಮಗೆ ಪರಿಚಯವಿಲ್ಲದವನಿಗೂ ಸಲಾಮ್ ಹೇಳಿ ಅಭಿವಂದಿಸಿರಿ.

ಇದು ಎಂತಹ ಆಜ್ಞೆ ಎಂದರೆ, ಇದು ಎಂತಹ ಚಿಕಿತ್ಸೆ ಎಂದರೆ ಅದರ ಆತ್ಮವನ್ನು ಅರ್ಥ ಮಾಡಿಕೊಂಡು ಬಳಸಿದರೆ ಲೋಕದಲ್ಲಿ ಕಲಹಗಳು ಕೊನೆಗೊಳ್ಳುವುವು. ಒಬ್ಬರಿನ್ನೊಬ್ಬರಿಗೆ ಶಾಂತಿಯನ್ನು ಹಾರೈಸುವಾಗ ಹೃದಯದಲ್ಲಿ ದ್ವೇಷ ಮತ್ತು ದುರಹಾಂಕಾರದ ಭಾವನೆಗಳು ಇರಲು ಸಾಧ್ಯವಿಲ್ಲ. ಆದರೆ ಈ ಹಾರೈಕೆ ಹೃದಯದಿಂದ ಹೊರಟಿರಬೇಕಾದುದು ಆವಶ್ಯಕ ಶರತ್ತಾಗಿದೆ. ದುರ್ಗುಣಗಳಿಲ್ಲದಿದ್ದರೆ ಸಮಾಜದಲ್ಲಿ ಯಾವುದೇ ಕಲಹ ಉಂಟಾಗಲಾರದು. ಶಾಂತಿಯ ಸಂದೇಶವನ್ನು ಬಹಳ ವಿಶಾಲವಾಗಿ ಹರಡಬೇಕು. ಈ ವಿಶಾಲತೆ ಕೇವಲ ತನ್ನವರಿಗೆ ಮತ್ತು ತನ್ನ ಪರಿಚಿತರಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಇಸ್ಲಾಮ್ ಹೇಳುವುದಿಲ್ಲ. ಈ ಸಂದೇಶವನ್ನು ಪ್ರತಿಯೊಬ್ಬನಿಗೆ ನೀಡಬೇಕು. ಜಲ್ಸಕ್ಕೆ ಬರುವ ಪ್ರತಿಯೊಬ್ಬನು ತನ್ನ ಸುತ್ತು ಮುತ್ತಲೂ ಇರುವವರಿಗೆ ಸಲಾಮ್ ಹೇಳುವುದು ಕಡ್ಡಾಯವಾಗಿದೆ. ಇದರಿಂದ ನಾವು ಅಲ್ಲಾಹನ ಅನುಗ್ರಹವನ್ನು ಗಳಿಸುವವರಾಗುವೆವು.

ಜಲ್ಸದ ವ್ಯವಸ್ಥೆಗೆ ಸಂಬಂಧಿಸಿ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಇದರ ಬಗ್ಗೆ ಇದರ ಮೊದಲು ಸಾಕಷ್ಟು ಹೇಳಿದ್ದರೂ ಪುನಃ ನೆನಪಿಸುವುದು ಸಹ ಆವಶ್ಯಕವಾಗಿದೆ. ಸಾಮಾನ್ಯವಾಗಿ ಚಿಕ್ಕ ಮಕ್ಕಳು ತಾಯಂದಿರ ಜೊತೆಗಿರುತ್ತಾರೆ. ಎಂಟು-ಹತ್ತು ವರ್ಷ ಪ್ರಾಯದ ಮಕ್ಕಳು ಕೆಲವೊಮ್ಮೆ ಪುರುಷರ ಜೊತೆಗಿರುತ್ತಾರೆ. ಇಂತಹ ಮಕ್ಕಳನ್ನು ಸಮಾಧಾನ ಪಡಿಸಲು ಹೊರಗೆ ಕರೆದುಕೊಂಡು ಹೋಗಬಾರದು. ಜಲ್ಸಗಾಹ್ ಒಳಗೆ ಆಟ ಆಡಲು ಸಹ ಬಿಡಬಾರದು. ಮಕ್ಕಳಲ್ಲಿ ಜಲ್ಸದ ಶಿಸ್ತಿನ ಬಗ್ಗೆ ತಿಳುವಳಿಕೆ ಉಂಟು ಮಾಡಬೇಕು. ಏಳು ವರ್ಷದ ಮಗುವಿಗೆ ನಮಾಝ್ ಕಲಿಸಲು ಹೇಳಿರುವುದು ಏಕೆಂದರೆ ಆಗ ಮಗುವಿಗೆ ಪ್ರಜ್ಞೆ ಬೆಳೆದಿರುತ್ತದೆ. ಮಕ್ಕಳಿಗೆ ಜಲ್ಸಕ್ಕೆ ಬಂದ ಉದ್ದೇಶ ತಿಳಿಸಬೇಕು. ಚಿಕ್ಕ ಪ್ರಾಯದಲ್ಲಿ ಜಲ್ಸದ ಪಾವಿತ್ರ್ಯತೆ ಬಗ್ಗೆ ಪ್ರಜ್ಞೆ ಉಂಟಾಗದಿದ್ದರೆ ದೊಡ್ಡವರಾದ ನಂತರ ಸಹ ಆ ಮಕ್ಕಳು ಜಲ್ಸದ ಬಗ್ಗೆ ಗೌರವ ಹೊಂದಲಾರರು. ಈ ಮಕ್ಕಳ ನೆವನದಿಂದ ತಂದೆ ಸಹ ಹೊರಗೆ ಸುತ್ತಾಡುತ್ತಾರೆ. ಮಕ್ಕಳು ಆಟವಾಡುತ್ತಾ ಇರುವ ಬಗ್ಗೆ ದೂರುಗಳು ಬರುತ್ತವೆ. ಜಲ್ಸದ ಬಗ್ಗೆ ತಪ್ಪು ಭಾವನೆ ತಲೆದೋರುತ್ತದೆ. ಮಹಿಳೆಯರ ಬಗ್ಗೆ ಸಹ ದೂರುಗಳಿವೆ. ಅವರು ಜಲ್ಸದ ಕಾರ್ಯಕ್ರಮಗಳನ್ನು ಆಲಿಸದೆ ಹೊರಗೆ ಹೋಗಿ ಮಾತನಾಡುತ್ತಾ ಕುಳಿತುಕೊಳ್ಳುತ್ತಾರೆಂದು. ಅವರು ಭಾಷಣಗಳನ್ನು ಆಲಿಸಬೇಕು. ಭಾಷಣಗಳನ್ನು ಆಲಿಸುವುದರಿಂದ ಜ್ಞಾನವರ್ಧನೆ ಆಗುವುದಲ್ಲದೆ ಆಧ್ಯಾತ್ಮಿಕ ಪ್ರಗತಿಗೂ ಸಹಾಯಕವಾಗುತ್ತದೆ. ಯಾವುದೇ ಅಹ್ಮದಿ ಭಾಷಣಕಾರ ಪವಿತ್ರ ಖುರ್‌ಆನ್, ಹದೀಸು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳಿಗೆ ಹೊರಗೆ ಯಾವುದೇ ಮಾತನಾಡುವುದಿಲ್ಲ, ಈಗಿನ ಕಾಲದ ಆವಶ್ಯಕತೆ ಇದೇ ಆಗಿದೆ. ಜಲ್ಸಕ್ಕೆ ಆಗಮಿಸುವವರು ಜಲ್ಸಗಾಹದ ಒಳಗೆ ಕುಳಿತು ಭಾಷಣಗಳನ್ನು ಆಲಿಸಿ ಜಲ್ಸದ ಸರಿಯಾದ ಲಾಭವನ್ನು ಗಳಿಸಬೇಕು. "ಆ ಭಾಷಣಕಾರನ ಭಾಷಣ ಆಲಿಸುವೆನು. ಆ ಇನ್ನೊಬ್ಬನ ಭಾಷಣ ಆಲಿಸುವುದಿಲ್ಲ" ಎಂದು ಹೇಳಬಾರದು. "ನಾವು ಆ ಭಾಷಣ ಇದರ ಮೊದಲು ಆಲಿಸಿದ್ದೇವೆ" ಎಂದು ಸಹ ಹೇಳಬಾರದು. ಪ್ರತಿಯೊಬ್ಬ ಭಾಷಣಕಾರ ಭಾಷಣಕ್ಕೆ ಸಿದ್ಧತೆ ನಡೆಸಿ ಆಗಮಿಸುತ್ತಾರೆ. ಎಲ್ಲಾ ಭಾಷಣಗಳನ್ನು ಆಲಿಸಬೇಕು. ಜಲ್ಸಕ್ಕೆ ಬಂದವರು ಜಲ್ಸದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಆಲಿಸಲು ಪ್ರಯತ್ನಿಸಬೇಕು.

ಚಿಕ್ಕ ಮಕ್ಕಳನ್ನು ಹೊಂದಿರುವ ತಾಯಂದಿರಿಗೆ ಬೇರೆಯೇ ಡೇರೆ ಇದೆ. ಅಲ್ಲಿ ಮಕ್ಕಳ ಬೊಬ್ಬೆ ಕಡಿಮೆ ಇದೆ ಎಂದೂ ಆದರೆ ತಾಯಂದಿರು ಪರಸ್ಪರ ಹೆಚ್ಚು ಮಾತನಾಡುತ್ತಾರೆಂದೂ ದೂರುಗಳು ಬರುತ್ತವೆ. ಇದರ ಬಗ್ಗೆ **ಲಜ್ನ**ದವರು ಸಹ ಗಮನ ಹರಿಸಬೇಕು. ಜಲ್ಸದ ವ್ಯವಸ್ಥೆ ಮಾಡುವವರೂ ಸ್ವತಃ ಮಹಿಳೆಯರೂ ಗಮನಿಸಬೇಕು. ಕಾರ್ಯಕರ್ತರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ ತಮ್ಮ ಕೆಲಸ ಉತ್ತಮವಾಗಿ ನಿರ್ವಹಿಸಲು ಶ್ರದ್ಧೆ ವಹಿಸಿರಿ. ಯಾವುದೇ ವಿಷಯವನ್ನು ನಿರ್ಲಕ್ಷಿಸಬೇಡಿರಿ. ಸೆಕ್ಯುರಿಟಿಯವರ ಹಾಗೆ ಇತರ ಕಾರ್ಯಕರ್ತರೂ ಪ್ರಜ್ಞೆಯಿಂದ ಸುತ್ತಲೂ ವೀಕ್ಷಿಸುತ್ತಿರಬೇಕು. ಜಲ್ಸದಲ್ಲಿ ಭಾಗವಹಿಸುವ ಅಹ್ಮದಿಯರು ಸಹ ನಮ್ಮ ಸೆಕ್ಯುರಿಟಿ ಸದಸ್ಯರೇ ಆಗಿದ್ದಾರೆ. ಪ್ರತಿಯೊಬ್ಬ ಅಹ್ಮದಿ ತನ್ನ ಸುತ್ತಲೂ ವೀಕ್ಷಿಸುತ್ತಾ ಇರಬೇಕು ಮತ್ತು ಸಂಶಯ ತಲೆದೋರಿದರೆ ಕೂಡಲೆ ಕಾರ್ಯಕರ್ತರಿಗೆ ಅದರ ಬಗ್ಗೆ ತಿಳಿಸಬೇಕು. ಜಲ್ಸಗಾಹ್ ಪ್ರವೇಶಿಸುವಾಗ ಮತ್ತು ಜಲ್ಸಗಾಹ್‌ದಿಂದ ಹೊರಗೆ ಹೋಗುವಾಗ ನೂಕು ನುಗ್ಗಲು ಇರುತ್ತದೆ. ಆಗ ಬಹಳ ಜಾಗರೂಕರಾಗಿರಬೇಕು. ಬಹಳ ಸಹನೆಯಿಂದ ವರ್ತಿಸಬೇಕು. ಇಂತಹ ಸಂದರ್ಭಗಳಲ್ಲಿ ಸಹ ಸೆಕ್ಯುರಿಟಿಯವರು ಬಹಳ ಜಾಗರೂಕರಾಗಿರಬೇಕು. ಇಂತಹ ಸಂದರ್ಭಗಳಲ್ಲಿ ಜಗಳ ತಲೆದೋರದಂತೆ ಪ್ರಯತ್ನಿಸಬೇಕು. ಕಾರ್ಯಕರ್ತರು ನೀಡುವ ಮಾರ್ಗದರ್ಶನಗಳನ್ನು ಪಾಲಿಸಬೇಕು. ಅವರು ಹಿರಿಯರಾಗಿರಲಿ ಕಿರಿಯರಾಗಿರಲಿ ಅವರ ಮಾರ್ಗ ಸೂಚಿಗಳನ್ನು ಪಾಲಿಸಬೇಕು.

ಜಲ್ಸದ ಕಾರ್ಯಕ್ರಮಗಳ ಪಟ್ಟಿ ಪ್ರಕಟವಾಗಿದೆ. ಅದರಲ್ಲಿ ಆವಶ್ಯಕ ಮಾರ್ಗದರ್ಶನಗಳಿವೆ. ಅವುಗಳನ್ನು ಓದಿ ಪಾಲಿಸಿರಿ.

ಪ್ರತಿಯೊಬ್ಬರು ತಮ್ಮ ಗುರುತಿನ ಚೀಟಿಯನ್ನು ಸಂರಕ್ಷಿಸಿ ಉಪಯೋಗಿಸಬೇಕು. ಅದು ಕಡ್ಡಾಯವಾಗಿದೆ. ಎಲ್ಲೆಲ್ಲಿಗೆ ಸಂದರ್ಶನ ನೀಡಬಹುದೆಂದು ಗುರುತಿನ ಚೀಟಿಯಲ್ಲಿ ಬರೆಯಲಾಗಿದೆಯೋ ಅಲ್ಲಿಗೆ ಮಾತ್ರ ಪ್ರವೇಶ ಮಾಡಬೇಕು. ಒಂದು ಸ್ಥಳದಲ್ಲಿರುವ

ಕಾರ್ಯಕರ್ತ ಪರಿಚಿತನಾಗಿದ್ದರೂ, ಅಲ್ಲಿಗೆ ಪ್ರವೇಶಿಸಲು ಅನುಮತಿ ಇಲ್ಲದಿದ್ದರೆ ಪ್ರವೇಶಿಸಲು ಪ್ರಯತ್ನಿಸಬಾರದು. ಕಾರ್ಡುಗಳನ್ನು ವರ್ಗಾಯಿಸಬಾರದು.

ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಜಲ್ಸ ಅನುಗ್ರಹ ಪೂರ್ಣವಾಗಲಿ ಎಂದು ಎಲ್ಲರೂ ಪ್ರಾರ್ಥಿಸಿರಿ. ಸಾಧ್ಯವಿರುವವರು ಪ್ರತಿದಿನ ಇದರ ಬಗ್ಗೆ ಸದ್‌ಖ ಸಹ ನೀಡಬಹುದು. ಸದ್‌ಖ ನೀಡುವುದು ಆವಶ್ಯಕವೂ ಆಗಿದೆ. ಅಲ್ಲಾಹನು ಈ ಜಲ್ಸವನ್ನು ಎಲ್ಲ ರೀತಿಯಲ್ಲೂ ಅನುಗ್ರಹ ಪೂರ್ಣವನ್ನಾಗಿ ಮಾಡಲಿ. ನಾವು ಅನುಗ್ರಹಗಳನ್ನು ಬಾಚಿಕೊಳ್ಳುವವರಾಗೋಣ.

---------------*****---------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 29-08-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

*Email*: **khutuba.kannada@gmail.com**